ಹೋಗಿದ್ದಾರೆ. ಅವರಲ್ಲಿ ನಮಗೆ ಬೇಕಾದವನು ಒಬ್ಬನಿದ್ದಾನೆ. ಅವನಿಂದ ಖಬರು ಬಂತು. ಮೊದಲು ಅವರನ್ನು ಅಲ್ಲಿಂದ ಬೇರೆಕಡೆಗೆ ಸಾಗಿಸಬೇಕು. ನೀನೇ ಏನಾದರೂ ಮಾಡು. ಅವರು ಅಲ್ಲಿರೋದು ಕ್ಷೇಮ ಅಲ್ಲ ಅಂತ ಅಂಗಲಾಚಿದ.

ಅಯ್ಯಗಾರು ಅರೆಸ್ಟ್ ಆದರೆ ನಮ್ಮ ಕಥೆ ಮುಗಿದ ಹಾಗೇ. ನಮ್ಮ ಹೋರಾಟ, ಪ್ರತಿಭಟನೆ ಎಲ್ಲ ಬಂದ್ ಆಗಿಬಿಡ್ತವೆ ಅಂತ ಪೇಚಾಡಿಕೊಂಡ. ರಾತ್ರಿ ಬಹಳ ಹೊತ್ತಿನವರೆಗೆ ಇಬ್ಬರೂ ಮುಂದೇನು ಮಾಡಬೇಕು ಅನ್ನೋದನ್ನು ಚರ್ಚಿಸಿದರು. ಹೇಗಾದರೂ ಮಾಡಿ ಅಯ್ಯಗಾರು ಅವರನ್ನು ಸುರಕ್ಷಿತ ಜಾಗಕ್ಕೆ ಸೇರಿಸಬೇಕು ಅಂತ ತೀರ್ಮಾನಿಸಿದರು.

ತಿರುಪತಿಗೆ ಹೋಗುವ ಬಸ್ಸುಗಳು ರಾತ್ರಿ ಹನ್ನೆರಡಕ್ಕೆ ಅಲ್ಲಿಂದ ಹೊರಡುತ್ತವೆ. ಎಸ್‌ಪಿ ಸಾಹೇಬರೇ ಯಾತ್ರೆ ಉದ್ಘಾಟಿಸುತ್ತಾರೆ ಅಂದ ಮೇಲೆ ನಮ್ಮ ಪೊಲೀಸರ ಕಿರಿಕಿರಿ ಇರಲ್ಲ. ಕಡಪಾ ದಾಟಿ ಮುಂದೆ ಹೋದ ಮೇಲೆ ಎಲ್ಲಾದರೂ ಒಂದು ಕಡೆ ಬಸ್ಸು ನಿಲ್ಲಿಸ್ತೀವಿ. ಅಯ್ಯ ಅವರನ್ನು ಇಳಿಸಿಕೊಂಡು ನೀವು ಕಾರಿನಲ್ಲಿ ರಾಯಚೋಟಿ ಕಡೆಗೋ ಅಥವಾ ಬೇರೆ ಎಲ್ಲಿಗಾದರೂ ಕರೆದುಕೊಂಡು ಹೋಗಿ. ಬೆಳಕು ಹರಿಯುವುದರೊಳಗೆ ಎಲ್ಲವೂ ಮುಗಿದು ಹೋಗಬೇಕು. ಯಾತ್ರೆಗೆ ತೊಂದರೆ ಆಗಬಾರದು ಅಂತ ಇಬ್ಬರೂ ಮಾತಾಡಿಕೊಂಡರು.

ಅಯ್ಯಗಾರು ಈಗ ಗಡ್ಡ ಮೀಸೆ ಬೆಳೆಸಿಕೊಂಡು ಋಷಿಯಂತೆ ಕಾಣ್ತಾರೆ. ನಮ್ಮ ಪೊಲೀಸರಿಗೆ ಅವರ ಪರಿಚಯ ಇಲ್ಲ. ನೀವು ಹೆದರೋದು ಬೇಡ. ನಮ್ಮ ಬಾರ್ಡರ್ ದಾಟಿಸೋದು ನನ್ನ ಜವಾಬ್ದಾರಿ. ಮುಂದಿನದು ನಿಮ್ಮದು ಅಂತ ರೆಡ್ಡಿ ಹೇಳಿದ ಮೇಲೆ ಪೆದ್ದಾಯನ ನಿರಾಳನಾದ.

ಮುತ್ಯಾಲ ಮತ್ತು ಅವನ ಹೆಂಡತಿ ಇನ್ನಷ್ಟು ದಿನ ಅಲ್ಲೇ ಇರಲಿ. ಅವರು ಅಲ್ಲಿರೋವರೆಗೆ ನಿಮ್ಮ ಸರಕು ಸೇಫಾಗಿರುತ್ತೆ. ಟೈಂ ನೋಡಿಕೊಂಡು ಅವನ್ನು ನಾನೇ ಕಡಪಾಕ್ಕೆ ಮುಟ್ಟಿಸ್ತೀನಿ ಅಂತಲೂ ರೆಡ್ಡಿ ಹೇಳಿದ.

★★★

ಪಾತಕಂದಕಂ ಸ್ಟ್ರೀಟ್‌ನಲ್ಲೋ ಅಥವಾ ಕಮೇಲ ರಸ್ತೆಯಲ್ಲಿರೊ ಮನೆಯೊಂದರಲ್ಲಿ ಅಯ್ಯಗಾರು ಅಡಗಿ ಕೂತಿದ್ದಾರೆ ಅಂತ ಪೊಲೀಸರಿಗೆ ಅನುಮಾನ ಬಂದಿದೆಯಂತೆ. ಅವರನ್ನು ಅರೆಸ್ಟ್ ಮಾಡಲು ಕಡಪಾ, ನಂದ್ಯಾಲದಿಂದ ಪೊಲೀಸರು ಬಂದಿದ್ದಾರೆ. ಅವರೆಲ್ಲ ಮಫ್ತಿಯಲ್ಲಿದ್ದಾರೆ. ಕಮೇಲ ರಸ್ತೆಯಲ್ಲಿ ಒಂದು, ಪಾತಕಂದಕಂ ಸ್ಟ್ರೀಟ್‌ನಲ್ಲಿ ಎರಡು ಡಬ್ಬಾ ಅಂಗಡಿಗಳು ಶುರುವಾಗಿವೆ. ಅವು ಪೊಲೀಸರೇ ಶುರು ಮಾಡಿರೊ ಅಂಗಡಿಗಳು. ಅಲ್ಲಿ ಲೇಡಿ ಪೀಸಿಗಳು ಕೂತಿದ್ದಾರೆ. ರಸ್ತೆಯಲ್ಲಿ ಹೋಗೊರು, ಬರೋರ ಮೇಲೆ ಕಣ್ಣಿಟ್ಟು ಕಾಯ್ತಿದ್ದಾರೆ ಅನ್ನೋ ಸುದ್ದಿ ಕೇಶವ ರೆಡ್ಡಿಗೆ ತಲುಪಿತು. ಪ್ರತಿ ತಿಂಗಳೂ ಮಾಮೂಲು ಪಡೆಯುವ ಪೊಲೀಸನೊಬ್ಬ ಖುದ್ದು ತಲುಪಿಸಿದ ಮಾಹಿತಿ ಅದು. ಸುದ್ದಿ ಕೇಳಿದ ಮೇಲೆ ರೆಡ್ಡಿಗೆ ಆತಂಕ ಶುರುವಾಯಿತು.

ಶ್ರೀದೇವಿ ನಗರದ ಮೇಲೂ ಪೊಲೀಸರು ಕಾವಲು ಹಾಕಿರಬಹುದೇ ಅಂತ ಅನ್ನಿಸಲು ಶುರುವಾಯಿತು. ಎಸ್‌ಪಿ ಸಾಹೇಬರ ಬಂಗಲೆ ಪಕ್ಕದ ರಸ್ತೆಯಲ್ಲಿರೋ ಅಂಗಡಿಗಳ ಮುಂದೆ, ಸರ್ಕಲ್ ಬಳಿ ಇರೋ ಪಂಕ್ಚರ್ ಹಾಕುವ ಅಂಗಡಿಯ ಬಳಿ ಮಫ್ತಿ ಪೊಲೀಸರು ಇರಬಹುದು ಅನ್ನಿಸಲು ಶುರುವಾಯಿತು. ಸರ್ಕಲ್ ಸುತ್ತ ಮುತ್ತ ಯಾರಾದರೂ ಹೊಸಬರು ಇದ್ದಾರೆಯೇ ಹೋಗಿ ನೋಡಿ ಬನ್ನಿ ಅಂತ ಇಬ್ಬರನ್ನು ಕಳಿಸಿದ.

ಅಲ್ಲಿ ಹೊಸಬರು ಯಾರೂ ಕಾಣುತ್ತಿಲ್ಲ. ಎಸ್‌ಪಿ ಸಾಹೇಬರ ಬಂಗಲೆಗೆ ಕಾವಲಿರೊ ಪೀಸಿಗಳು ಆಗಾಗ ಸರ್ಕಲಿನ ಮೂಲೆಯ ಟೀ ಅಂಗಡಿಗೆ ಬಂದು ಹೋಗುತ್ತಾರೆ ಎನ್ನುವ ಮಾಹಿತಿಯಷ್ಟೇ ಸಿಕ್ಕಿತು. ಸದ್ಯ ಮಫ್ತಿ ಪೊಲೀಸರ ಕಣ್ಣು ದೇವಿನಗರದ ಮೇಲೆ ಇಲ್ಲ ಅನ್ನಿಸಿ ರೆಡ್ಡಿಗೆ ಸಮಾಧಾನವಾಯಿತು.

